ರಾಜ್ಯ ಒಕ್ಕಲಿಗರ ಸಂಘದ ಕೊಡುಗೆ



# ಒಕ್ಕಲಿಗರ ಪತ್ರಿಕೆ



ಸಂಪುಟ–15 । ಸಂಚಿಕೆ–7 । ಫೆಬ್ರವರಿ 2024

VOLUME 15 | ISSUE 7 | KARKAN/2010/37125 BANGALORE | FEBRUARY 2024 | PRICE: Rs. 10/-



## ದೆಹಲಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಭೇಟಿ

## ರಾಜ್ಯ ಒಕ್ಕಲಿಗರ ಸಂಘದಿಂದ ಡಾ॥ ಸಿ.ಎನ್.ಮಂಜುನಾಥ್ ಅವರಿಗೆ ಸನ್ಮಾನ





## ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್

# ಒಕ್ಕಲಿಗರ ಪತ್ರಿಕೆ

ಸಂಪುಟ-15 । ಸಂಚಿಕೆ-7 । ಫೆಬ್ರವರಿ 2024



ಪ್ರಧಾನ ಸಂಪಾದಕರು

ಶ್ರೀ ಡಿ. ಹನುಮಂತಯ್ಯ
ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ

ಸಂಪಾದಕೀಯ ಮಂಡಳಿ

ಶ್ರೀ ಬಿ. ಕೆಂಚಪ್ಪಗೌಡರು
ಶ್ರೀ ಎಲ್. ಶ್ರೀನಿವಾಸ್
ಶ್ರೀ ಸಿ. ದೇವರಾಜು (ಹಾಪ್‌ಕಾಮ್ಸ್)
ಶ್ರೀ ಹೆಚ್.ಸಿ. ಜಯಮುತ್ತು
ಶ್ರೀ ವೆಂಕಟರಾಮೇಗೌಡ
ಶ್ರೀ ಸಿ.ಎಂ. ಮಾರೇಗೌಡ
ಶ್ರೀ ಎಲುವಳ್ಳಿ ಎನ್. ರಮೇಶ್
ಶ್ರೀ ಬಿ.ಪಿ. ಮಂಜೇಗೌಡ
ಶ್ರೀ ಬಿ.ವಿ. ರಾಜಶೇಖರ ಗೌಡ

ಸಂಪಾದಕರು

ಶ್ರೀ ಆನಂದ್ ಕುಮಾರ್ ಎಸ್.

ಸಹಕಾರ

ಪ್ರೊ. ಬೊಮ್ಮೇಗೌಡ
ಸಹಾಯಕ ಪ್ರಾಧ್ಯಾಪಕರು
ವಿ.ವಿ.ಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು

ವಿನ್ಯಾಸ

ಪ್ರಶಾಂತ್

ತಾಂತ್ರಿಕ ಸಹಾಯ

ಸಚಿನ್ ವಿ.ವಿ.



ಕಛೇರಿ ವಿಳಾಸ

ಒಕ್ಕಲಿಗರ ಪತ್ರಿಕೆ
ನಾಡಪ್ರಭು ಕೆಂಪೇಗೌಡ ಭವನ
# 148, ರಾಜ್ಯ ಒಕ್ಕಲಿಗರ ಸಂಘ
ಕೆ. ಆರ್. ರಸ್ತೆ
ಬೆಂಗಳೂರು-04
rvsmediacell@gmail.com


## ಸಂಪಾದಕೀಯ



ಈ ಸಂಚಿಕೆಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ವಿಶ್ವ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಒಕ್ಕಲು ಸಮುದಾಯದ ಹೆಮ್ಮೆ, ನಾಡು ಕಂಡಂತಹ ಶ್ರೇಷ್ಠ ವೈದ್ಯ, ಬಡ ಕುಟುಂಬದಿಂದ ಹುಟ್ಟಿ ಬಂದ ಜನಾನುರಾಗಿ, ಲಕ್ಷಾಂತರ ಕುಟುಂಬಗಳ ಮನೆ- ಮನ ಬೆಳಗಿದ ಜ್ಯೋತಿ, ಸದಾ ಹಸನ್ಮುಖಿ, ಸಮಾಜ ಚಿಂತಕರು, ಸಂಶೋಧಕರಾದ ಡಾ. ಸಿ.ಎನ್. ಮಂಜುನಾಥ್ ಅವರು ತಮ್ಮ ಸುಧೀರ್ಘ ಸಾರ್ಥಕ ಸೇವೆಯಿಂದ ದಿನಾಂಕ 31.01.2024 ರಂದು ಜಯದೇವ ಹೃದ್ರೋಗ ಆಸ್ಪತ್ರೆಯಿಂದ ನಿರ್ದೇಶಕರಾಗಿ ನಿವೃತ್ತರಾದರು. ಅವರ ಸೇವೆಯನ್ನು ಗುರುತಿಸಿ ದಿನಾಂಕ: 03.02.2024ರ ಶನಿವಾರ ಒಕ್ಕಲಿಗ ಸಂಘದ ಆವರಣದಲ್ಲಿರುವ ಕುವೆಂಪು ಕಲಾಕ್ಷೇತ್ರದಲ್ಲಿ ಅಭಿನಂದನಾ ಪೂರ್ವಕ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ನನ್ನ ಅಧ್ಯಕ್ಷತೆಯಲ್ಲಿ, ಸಂಘದ ಎಲ್ಲಾ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಒಳಗೊಂಡು ರಾಜ್ಯ ಒಕ್ಕಲಿಗ ಸಂಘದ ಅಧೀನ ಸಂಸ್ಥೆಗಳ ಎಲ್ಲಾ ವರ್ಗ ಮತ್ತು ವೃಂದದ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಸಡಗರದಿಂದ ಹಮ್ಮಿಕೊಂಡಿದ್ದೆವು.

ನವದೆಹಲಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಮಂಡಳಿಯ ಕೆಲವರು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ. ದೇವೇಗೌಡ ರವರನ್ನು ಅವರ ದೆಹಲಿ ನಿವಾಸದಲ್ಲಿ ಭೇಟಿಮಾಡಿ ನಮ್ಮ ಕೆಂಪೇಗೌಡ ವೈದ್ಯಕೀಯ ಕಾಲೇಜಿನಲ್ಲಿ ಈಗಿರುವ 150 ವೈದ್ಯಕೀಯ ಸೀಟುಗಳನ್ನು 250 ಸೀಟುಗಳಿಗೆ ಹೆಚ್ಚಿಸುವ ಸಲುವಾಗಿ ಮಾನ್ಯ ಕೇಂದ್ರ ಸಚಿವರ ಬಳಿ ಮನವಿ ಮಾಡುವ ಬಗ್ಗೆ ಚರ್ಚೆ ನಡೆಸಿದೆವು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾದ ಮಾನ್ಯ ಶ್ರೀ ಡಿ.ವಿ.ಸದಾನಂದಗೌಡರು ಹಾಗೂ ಮಾಜಿ ಸಚಿವರಾದ ಮಾನ್ಯ ಶ್ರೀ ವಿ.ಸೋಮಣ್ಣನವರು ಉಪಸ್ಥಿತರಿದ್ದರು.

ವಿಶ್ವಾದ್ಯಂತ ಬದಲಾಗುತ್ತಿರುವ ಆರೋಗ್ಯ ಸೇವೆಗಳ ದೃಷ್ಟಿಯಿಂದ ಫಿಸಿಯೋಥೆರಪಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಫಿಸಿಯೋಥೆರಪಿಯಿಂದ ಆರ್ಥೋ, ನ್ಯೂರೋ, ದಿವ್ಯಾಂಗ ಮಕ್ಕಳುಗಳಿಗೆ ಹಾಗೂ ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಕಡಿಮೆ ವೆಚ್ಚದಲ್ಲಿ ಫಿಸಿಯೋಥೆರಪಿ ಚಿಕಿತ್ಸೆಯನ್ನು ಕೊಡಲಾಗುತ್ತಿದೆ ಮತ್ತು ಬಡವರು ಹೆಚ್ಚಾಗಿ ಇದರಲ್ಲಿ ಉಪಯೋಗವನ್ನು ತೆಗೆದುಕೊಳ್ಳುತ್ತಿದ್ದಾರೆ. ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಿಂದ ಫಿಸಿಯೋಥೆರಪಿ ಸಹ ಅನೇಕ ವಿಶೇಷ ವಿಭಾಗಗಳಿದ್ದು ವಿಭಾಗಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಉತ್ತಮವಾದ ಮಾರ್ಗದರ್ಶನ ನೀಡುತ್ತಿದ್ದು ಮತ್ತು ಸಂಬಂಧಪಟ್ಟ ವಿಭಾಗಗಳ ರೋಗಿಗಳಿಗೆ ಉತ್ತಮವಾದ ಚಿಕಿತ್ಸೆ ನೀಡಲು ಮತ್ತು ಸಂಶೋಧನೆಗಳನ್ನು ನಡೆಸಲು ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯವು ಉತ್ತಮ ನಿದರ್ಶನವಾಗಿದೆ.

ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾದ ರಾಜ್ಯ ಒಕ್ಕಲಿಗರ ಸಂಘದ ಅಧೀನ ಸಂಸ್ಥೆಯಾದ ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್ ಸಂಸ್ಥೆಯು 1993ರಲ್ಲಿ ಶ್ರೀಗಂಧದ ಕಾವಲು ಪ್ರಥಮ ದರ್ಜೆ ಕಾಲೇಜು ಎಂಬ ಹೆಸರಿನಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಎಚ್.ಇ.ಕೆ ವಿಭಾಗವನ್ನು ಪ್ರಾರಂಭಿಸಿ ಹಲವಾರು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡುತ್ತಾ ಬಂದಿದೆ. ಈ ಒಂದು ವಿಭಾಗದಿಂದಲೇ ಹಲವಾರು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಜೊತೆಗೆ ವಿವಿಧ ವಿಭಾಗಗಳಲ್ಲಿಯೂ ವಿದ್ಯಾದಾನವನ್ನು ಮಾಡಿ ಸಾಧನೆಯನ್ನು ಸಾಧಿಸುವ ದೃಷ್ಟಿಯಿಂದ 1999 ರಲ್ಲಿ ಎಚ್.ಇ.ಪಿ., 2000ನೇ ಇಸವಿಯಲ್ಲಿ ಎಚ್.ಇ.ಎಸ್ ಕಲಾವಿಭಾಗಗಳನ್ನು ತೆರೆಯಲಾಯಿತು. ಇಂದಿನ ಪೈಪೋಟಿಯುಳ್ಳ ಪ್ರಪಂಚದಲ್ಲಿ, ಕಲಾ ವಿಭಾಗದಲ್ಲಿ ಸಾಕಷ್ಟು ಸಾಧನೆ ಮಾಡುವುದರ ಜೊತೆಗೆ 2005ರಲ್ಲಿ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಿ ಹಲವಾರು ಬಡ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ವಿದ್ಯಾದಾನವನ್ನು ಮಾಡುತ್ತಾ ಬಂದಿದೆ.

**ಶ್ರೀ ಡಿ. ಹನುಮಂತಯ್ಯ**
ಪ್ರಧಾನ ಸಂಪಾದಕರು

ರಾಜ್ಯ ಒಕ್ಕಲಿಗರ ಸಂಘದಿಂದ

# ಡಾ|| ಸಿ.ಎನ್.ಮಂಜುನಾಥ್ ಅವರಿಗೆ ಸನ್ಮಾನ



ಜಯದೇವ ಹೃದ್ರೋಗ ಆಸ್ಪತ್ರೆಯನ್ನು ವಿಶ್ವ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಒಕ್ಕಲು ಸಮುದಾಯದ ಹೆಮ್ಮೆ, ನಾಡು ಕಂಡಂತಹ ಶ್ರೇಷ್ಠ ವೈದ್ಯ, ಬಡ ಕುಟುಂಬದಿಂದ ಹುಟ್ಟಿ ಬಂದ ಜನಾನುರಾಗಿ, ಲಕ್ಷಾಂತರ ಕುಟುಂಬಗಳ ಮನೆ– ಮನ ಬೆಳಗಿದ ಜ್ಯೋತಿ, ಸದಾ ಹಸನ್ಮುಖಿ, ಸಮಾಜ ಚಿಂತಕರು,ಸಂಶೋಧಕರು, ಸಹದ್ಯೋಗಿಗಳ ಮನೆದೇವರು ಎಂದೇ ಖ್ಯಾತನಾಮರಾಗಿರುವ ಡಾ. ಸಿ.ಎನ್. ಮಂಜುನಾಥ್ ಜಯದೇವ ಹೃದ್ರೋಗ ಆಸ್ಪತ್ರೆ ನಿವೃತ್ತ ನಿರ್ದೇಶಕರಿಗೆ ಘನತವೆತ್ತ ರಾಜ್ಯ ಒಕ್ಕಲಿಗ ಸಂಘದ ವತಿಯಿಂದ, ದಿನಾಂಕ: 03.02.2024ರ ಶನಿವಾರ ಒಕ್ಕಲಿಗ ಸಂಘದ ಆವರಣದಲ್ಲಿರುವ ಕುವೆಂಪು ಕಲಾಕ್ಷೇತ್ರದಲ್ಲಿ ಅಭಿನಂದನಾ ಪೂರ್ವಕ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ರಾಜ್ಯ ಒಕ್ಕಲಿಗ ಸಂಘದ ಅಧ್ಯಕ್ಷರಾದ ಶ್ರೀಯುತ ಡಿ.ಹನುಮಂತಯ್ಯ ರವರ ಅಧ್ಯಕ್ಷತೆಯಲ್ಲಿ ಸಂಘದ ಎಲ್ಲಾ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನೊಳಗೊಂಡು ರಾಜ್ಯ ಒಕ್ಕಲಿಗ ಸಂಘದ ಅಧೀನ ಸಂಸ್ಥೆಗಳ ಎಲ್ಲಾ ವರ್ಗ ಮತ್ತು ವೃಂದದ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಶ್ರೀಯುತರಿಗೆ ಸಮುದಾಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಎನ್. ಬಾಲಕೃಷ್ಣ (ನೆಲ್ಲಿಗೆರೆ ಬಾಲು) ಇವರ ನೇತೃತ್ವದಲ್ಲಿ ಕಲಾಕ್ಷೇತ್ರದ ದ್ವಾರದಿಂದ ನಾದಸ್ವರದೊಂದಿಗೆ ಪುಷ್ಪಾರ್ಚನೆ ಮೂಲಕ ವೇದಿಕೆಗೆ ಕರೆತರಲಾಯಿತು. ಮತ್ತು ಸಮಸ್ತ ಒಕ್ಕಲು ಸಮುದಾಯದ ಹಾಗೂ ಸಿಬ್ಬಂದಿಗಳ ಪರವಾಗಿ ಶ್ರೀಯುತರಿಗೆ ಕುವೆಂಪು ಕಲಾಕ್ಷೇತ್ರದ ವೇದಿಕೆಯಲ್ಲಿ ನೆರೆದಿದ್ದ ಎಲ್ಲಾ ರಾಜ್ಯ ಒಕ್ಕಲಿಗ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳಿಂದ ಪುಷ್ಪವೃಷ್ಟಿ ಸುರಿಸುವ ಮುಖೇನ ಸಕಲ ಗೌರವಗಳಿಂದ ಶ್ರೀಯುತ ಡಾ.ಸಿ. ಎನ್. ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು. ಮತ್ತು ಸಂಘದ ಅಧೀನ ಸಂಸ್ಥೆಗಳಾದ ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಕೆಂಪೇಗೌಡ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ದೇಶವೇ ತಿರುಗಿ ನೋಡುವಂತೆ ಮಾಡಲು ಶ್ರೀಯುತರ ಮಾರ್ಗದರ್ಶನ, ಸಹಕಾರ ಬೇಕೆಂದು ಮನಗಂಡು ಒಕ್ಕೊರಲಿನಿಂದ ಈ ಸಂಸ್ಥೆಗಳ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಆರ್.ವಿ.ಎಸ್ ನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳು ಮನವಿಯನ್ನು ಕಾರ್ಯಕ್ರಮದಲ್ಲಿ ನೆರೆದಿದ್ದ ಸಹಸ್ರಾರು ಸಂಖ್ಯೆಯ ಜನಸ್ತೋಮವನ್ನು ಸಾಕ್ಷಿಯಾಗಿ ಇರಿಸಿಕೊಂಡು ಕೋರಿದರು.

ಶ್ರೀಯುತರು ನಮ್ಮವರು ಎನ್ನುವುದಕ್ಕೂ ಮಿಗಿಲಾಗಿ ಅವರ ನಿಸ್ವಾರ್ಥ ಸೇವೆ ಎಂತಹದ್ದು ಎಂಬುದಕ್ಕೆ ಅಂದು ಕುವೆಂಪು ಕಲಾ ಕ್ಷೇತ್ರದಲ್ಲಿ ಎಲ್ಲಾ ಆಸನಗಳು ತುಂಬಿ, ದ್ವಾರದ ಎರಡು ಇಕ್ಕೆಲಗಳಲ್ಲಿ ನಿಂತು, ಜೊತೆಗೆ ಸ್ಥಳಾವಕಾಶದ ಕೊರತೆಯಿಂದ ಆಚೆಯೇ ಇದ್ದು, ತುಂಬು ಹೃದಯದಿಂದ ನಮ್ಮ ಸಿಬ್ಬಂದಿಗಳು ಮತ್ತು ಹಲವು ನಮ್ಮ ಸಮುದಾಯದ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಗೌರವವನ್ನು ಸಲ್ಲಿಸಿದ್ದು, ನನ್ನ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ಉಳಿದಿದೆ. ಮತ್ತು ಈ ರೀತಿಯ ಕಾರ್ಯಕ್ರಮವನ್ನು ರಾಜ್ಯ ಒಕ್ಕಲಿಗ ಸಂಘದ ಆವರಣದಲ್ಲಿ ನಾನು ನೋಡಿದ್ದು ಶ್ರೀ ನಾಡಪ್ರಭು ಕೆಂಪೇಗೌಡ ಜಯಂತೋತ್ಸವವನ್ನು ಹೊರತುಪಡಿಸಿ ಇದೇ ಮೊದಲು ಎಂದು ಭಾವಿಸುತ್ತೇನೆ.

ರಾಜ್ಯ ಒಕ್ಕಲಿಗ ಸಂಘದ ಆಡಳಿತ ಮಂಡಳಿಯು ಸಮುದಾಯ ಮತ್ತು ಸಮಸ್ತ ಸಿಬ್ಬಂದಿಗಳ ಪರವಾಗಿ ಗೌರವಿಸಿದ ಅಭಿನಂದನಾ ಪೂರ್ವಕ ಗೌರವ ಸಮರ್ಪಣೆಯನ್ನು ಸ್ವೀಕರಿಸಿದ ನಂತರ ಕಲಾ ಕ್ಷೇತ್ರದಲ್ಲಿ ನೆರೆದಿದ್ದವರನ್ನು ಉದ್ದೇಶಿಸಿ ಡಾ. ಸಿ.ಎನ್. ಮಂಜುನಾಥ್



ರವರು ತಾವು ಬೆಳೆದು ಬಂದ ಹಾದಿ, ತಮಗಾದ ಅಡೆ–ತಡೆಗಳು, ತಮ್ಮ ಪರಿಶ್ರಮದ ದಿನಗಳನ್ನು ಮೆಲಕು ಹಾಕುತ್ತಾ ಅವರ ಸರಿ ಸುಮಾರು 18 ವರ್ಷಗಳಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ರಾಜ್ಯ, ರಾಷ್ಟ್ರ ಮತ್ತು ವಿಶ್ವದಲ್ಲಿ ಗುರುತಿಸುವಂತೆ ಮಾಡಲು ಏನೆಲ್ಲಾ ಕಾರ್ಯತಂತ್ರಗಳನ್ನು ರೂಪಿಸಬೇಕಾಯಿತು, ಮತ್ತು ಅದರ ಪ್ರತಿಫಲವಾಗಿ ಇಂದು ಜಯದೇವ ಆಸ್ಪತ್ರೆಯ ಬಗ್ಗೆ ಪ್ರತಿಯೊಬ್ಬರು ಶ್ಲಾಘಿಸುವಂಥಾಗಿದೆ ಎಂದು ಹೇಳುತ್ತಾ,ಅವರು ಭಾಷಣವನ್ನು ಪ್ರಾರಂಭಿಸಿ ಮೊದಲಿಗೆ ಅವರ ವೃತ್ತಿ ಜೀವನದಲ್ಲಿ ಅವರು ಅಳವಡಿಸಿಕೊಂಡದ್ದು ಮೊದಲು ಚಿಕಿತ್ಸೆ ನಂತರ ಹಣ (treatment first money next), ಇದನ್ನು ಅಕ್ಷರಶಃ ನಾನು ಸಹ ಒಪ್ಪುತ್ತೇನೆ. ಏಕೆಂದರೆ ವೈದ್ಯೋ ನಾರಾಯಣೋ ಹರಿ, ಅಂದರೆ ರೋಗಿಗಳ ಪ್ರಾಣವನ್ನು ಯಾರು ಉಳಿಸುತ್ತಾರೋ ಅವರೇ ದೈವ. ನಾರಾಯಣನಿಗೆ ಸಮನಾದವರು ಎಂದು.

ಆದುದರಿಂದ ಆತಂಕದಲ್ಲಿ ತಮ್ಮ ತಮ್ಮ ಪ್ರಾಣ ಭಿಕ್ಷೆಯನ್ನು ಬೇಡಿ ಬಂದಂತವರಿಗೆ ಅವರಿಗಿರುವ ದುಗುಡ ಆತಂಕ ಭಯವನ್ನು ಮೊದಲು ದೂರ ಮಾಡಿ, ಸಾಂತ್ವನವನ್ನು ಹೇಳುವುದೇ ನಮ್ಮ ಮೊದಲ ಗುರಿಯಾಗಿರಬೇಕು ತದನಂತರ ಚಿಕಿತ್ಸೆ ವೆಚ್ಚವನ್ನು ಭರಿಸುವಂತೆ ಪ್ರೇರೇಪಿಸಬೇಕು. ನಾವು ಈ ರೀತಿ ಮಾಡುವುದರಿಂದ ಸಾವಿರಾರು ಕುಟುಂಬಗಳು ಉಳಿದಿವೆ ಮತ್ತು ಈ ರೀತಿ ಪ್ರೀತಿ ಆಧರಗಳಿಂದ ಅವರುಗಳಿಗೆ ಚಿಕಿತ್ಸೆ ನೀಡಿದರೆ ಹಲವಾರು ನಿರ್ಗತಿಕ ಬಡ ರೋಗಿಗಳ ಚಿಕಿತ್ಸೆಗೆ ದೇಣಿಗೆಯು ಸಹ ಸಂಗ್ರಹವಾಯಿತು. ಹಾಗೆಯೇ ಮಾತು ಮುಂದುವರಿಸಿ ಹಿಂದಿನ ಸಮಾಜಕ್ಕೂ ಈಗಿನ ಸಮಾಜಕ್ಕೂ ಇರುವ ವ್ಯತ್ಯಾಸವನ್ನು ನೆನೆದು ಸ್ವಲ್ಪ ಬೇಸರವನ್ನು ವ್ಯಕ್ತಪಡಿಸಿದರು. ಅಂದರೆ ಹಿಂದಿನವರು ಒಂದು ದೀಪದ ಹಾಗೆ ಜೀವಿಸುತ್ತಿದ್ದರು, ಹೇಗೆ ದೀಪ ತಾನುರಿದು ಜಗಕ್ಕೆ ಬೆಳಕನ್ನು ನೀಡುತ್ತದೆಯೋ ಅದೇ ರೀತಿಯಲ್ಲಿ ಹಿಂದಿನವರು ಸಹಾಯವನ್ನು ಮಾಡುತ್ತಿದ್ದರು. ಆದರೆ ಈಗಿನವರು ತಮ್ಮಲ್ಲಿರುವುದನ್ನು ತಮ್ಮ ಜೀವಿತಾವಧಿಯಲ್ಲಿ ಅನುಭವಿಸಲು ಸಾಧ್ಯವಿಲ್ಲದಿದ್ದಷ್ಟಿದ್ದರೂ, ಇನ್ನೊಂದು ಮನೆಯ ದೀಪವನ್ನು ಆರಿಸಿಯಾದರೂ ನಾವು ಬೆಳೆಯಬೇಕೆಂಬ ಮನೋಭಾವವನ್ನು ಹೊಂದಿದ್ದಾರೆ.

ಇದು ನಾಡಿಗೆ ಪೂರಕವಾದದ್ದಲ್ಲ ಮಾರಕವಾದದ್ದು ಎಂದು ಹೇಳುತ್ತಾ ಅವರ ವೃತ್ತಿ ಜೀವನದ ಕೆಲವು ಘಟನೆಗಳನ್ನು ಮೆಲುಕು ಹಾಕುತ್ತಾ ಹಿಂದಿನ ಸಮಾಜ ಸರ್ಕಾರ ಮತ್ತು ಕಾನೂನು ಎಲ್ಲವೂ ಸಹ ಉಳ್ಳವರ ಪಾಲಾಗಿದೆ ಅದಕ್ಕೆ ಒಂದು ಉದಾಹರಣೆ ಒಬ್ಬ ಬೆಂಜ್ ಕಾರ್ ಹೊಂದಿದ್ದ ಶ್ರೀಮಂತ ರೋಗಿ ನಮ್ಮ ಬಳಿ ಚಿಕಿತ್ಸೆಗಾಗಿ ಬಂದಾಗ ಸಾರ್ ನನ್ನಲ್ಲಿ ಬಿಪಿಎಲ್ ಕಾರ್ಡ್ ಇದೆ ನನಗೆ ಉಚಿತ ಚಿಕಿತ್ಸೆಯನ್ನು ನೀಡಿ ಎಂದು ಕೇಳಿದಾಗ, ಶ್ರೀಯುತರು ಒಂದು ಕ್ಷಣ ಆಶ್ಚರ್ಯ ಚಕಿತರಾಗಿದ್ದು ಉಂಟೆಂದು ಹೇಳಿದರು. ಈ ಎಲ್ಲಾ ಬೆಳವಣಿಗೆಗಳನ್ನು ತುಂಬಾ ಸೂಕ್ಷ್ಮವಾಗಿ ಗಮನಿಸಿದ ಅವರು ಬಡ ರೋಗಿಗಳ ಚಿಕಿತ್ಸೆಗಾಗಿ ಏನಾದರೂ ಮಾಡಲೇಬೇಕೆಂದು ಚಿಂತಿಸಿ, ನಿರ್ಗತಿಕ ಬಡ ರೋಗಿಗಳ ಚಿಕಿತ್ಸೆಗೆಂದು ನಿಧಿಯನ್ನು ಪ್ರಾರಂಭಿಸಿ. ಆ ನಿಧಿಗೆ ಆತ್ಮ ಸಂತೋಷದಿಂದ ನೀಡುವ ಕೈಯುಳ್ಳ ದಾನಿಗಳನ್ನು ಸಂಪರ್ಕಿಸಿ, ಅವರುಗಳಿಂದ ದೇಣಿಗೆ ಸಂಗ್ರಹಿಸಿ ಆ ಮುಖೇನ ಬಡ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಿದ್ದಾಗಿ ಮತ್ತು ಆ ನಿಧಿಯು ಸಹ ಇಂದು ನೂರಾರು ಕೋಟಿಗಳಲ್ಲಿ ಬೆಳೆದು ಜನೋಪಯೋಗಿಯಾಗಿ ಮಾಡಿರುತ್ತಾರೆ. ಇದು ಅವರ ಮಾತೃ ಹೃದಯಕ್ಕೆ ಸಾಕ್ಷಿ. ಹಾಗೆಯೇ ಮುಂದುವರೆದು ಒಬ್ಬ ಉತ್ತಮ ವೈದ್ಯ ದಕ್ಷ ಆಡಳಿತಗಾರನಾಗಲಾರ ವೃತ್ತಿ ಮತ್ತು ಆಡಳಿತ ಇವೆರಡರಲ್ಲೂ ಸಾಧಿಸಬೇಕಾದರೆ ಮೊದಲು ಅವರಲ್ಲಿ ತಾಳ್ಮೆ, ಮಾನವಿಯತೆ, ಶ್ರದ್ಧೆ, ವಿನಯ, ದೂರದೃಷ್ಟಿ, ಚಿಂತನೆ, ಆತ್ಮಾವಲೋಕನ ಮತ್ತು ಪ್ರಾಮಾಣಿಕತೆ ಈ ಎಲ್ಲಾ ಗುಣಗಳನ್ನು ಮೊದಲು ಅವರು ರೂಡಿಸಿಕೊಂಡಿರಬೇಕು





ಆದರೆ ಇಂದಿನ ಕಾಲಘಟ್ಟದಲ್ಲಿ ಶ್ರೀಯುತರು ಕಂಡಂತೆ ಬಹಳ ವಿರಳವೆಂದು ತಮ್ಮ ಭಾಷಣದಲ್ಲಿ ಹೇಳಿದರು. ಇದು ಸತ್ಯವೂ ಸಹ, ಮತ್ತು ಒಬ್ಬ ಆಡಳಿತಾಧಿಕಾರಿ ಹೇಗಿರಬೇಕೆಂದರೆ ತನ್ನ ಸಹೋದ್ಯೋಗಿ–ಗಳೊಂದಿಗೆ ತನ್ನ ಅಧೀನ ನೌಕರರುಗಳೊಂದಿಗೆ ಮತ್ತು ಚುನಾಯಿತ ಪ್ರತಿನಿಧಿ ಹಾಗೂ ಆಡಳಿತ ಮಂಡಳಿಯವರೊಂದಿಗೆ ಪ್ರೀತಿ, ವಿಶ್ವಾಸ, ಪ್ರಾಮಾಣಿಕ, ದಕ್ಷ, ಸಹಬಾಳ್ವೆ, ಸಮುಚಿತ್ತದಿಂದ ವ್ಯವಹರಿಸಬೇಕೇ ಹೊರತು ನಾನೇ ಹೆಚ್ಚು ನನಗಿಂತ ಮಿಗಿಲಿಲ್ಲ, ನಾ ಹೇಳಿದ್ದೇ ವೇದ ವಾಕ್ಯ ನಾ ಮಾಡಿದ್ದೆ ಆಡಳಿತ ಎಂಬ ರೀತಿಯಲ್ಲಿ ದರ್ಪದಿಂದ ಅಧಿಕಾರ ದುರುಪಯೋಗ ಪಡಿಸಿಕೊಂಡು ನೌಕರರುಗಳಿಗೆ ತೊಂದರೆ ನೀಡಬಾರದು ಎಂದರು.

ಮತ್ತು ನೌಕರರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರುಗಳ ಸಹಕಾರದೊಂದಿಗೆ ಸಂಸ್ಥೆಯನ್ನು ಅಭಿವೃದ್ಧಿ ಪಥಕ್ಕೆ ಕೊಂಡೊಯ್ಯ–ಬೇಕೆಂದು ಕಿವಿ ಮಾತನ್ನು ಹೇಳುತ್ತಾ, ತಮ್ಮ ಅಧಿಕಾರ ಅವಧಿಯಲ್ಲಿ ಯಾವುದೇ ಒಬ್ಬ ನೌಕರರಿಗೂ ಸಹ ಶಿಕ್ಷೆಯನ್ನು ನೀಡಿಲ್ಲ ಬದಲಾಗಿ, ತಪ್ಪು ಮಾಡಿದವರನ್ನು ಕರೆಸಿ ಅವರಿಗೆ ಬುದ್ಧಿ ಹೇಳಿ ಕಳಿಸಿದ್ದೇನೆ. ಅಂತಹವರು ಇಂದು ನಮ್ಮ ಸಂಸ್ಥೆಯ ಅಭಿವೃದ್ಧಿಪಡಿಸುವಲ್ಲಿ ನನಗೆ ಸಹಕಾರಿಯಾಗಿದ್ದರು ಎಂದು ತಮ್ಮ ಭಾಷಣದಲ್ಲಿ ನುಡಿದರು. ಇಂತಹ ಮಹನೀಯರ ಬಗ್ಗೆ ಹೇಳುತ್ತಾ ಬರೆಯುತ್ತಾ ಹೋದರೆ ಪದಗಳೇ ಸಾಲದೆ ಹೋಗುತ್ತದೆ, ಕೊನೆಯಲ್ಲಿ ಶ್ರೀಯುತ ಡಾ. ಸಿ.ಎನ್ ಮಂಜುನಾಥ್ ರವರು ರಾಜ್ಯ ಒಕ್ಕಲಿಗ ಸಂಘ ಮತ್ತು ಅದರ ಅಧೀನ ಸಂಸ್ಥೆಗಳು ಬೆಂಗಳೂರಿನ ಹೃದಯ ಭಾಗದಲ್ಲಿರುವುದರಿಂದ ಚುನಾಯಿತ ಆಡಳಿತ ಮಂಡಳಿ ಅಧೀನ ಸಂಸ್ಥೆಗಳ ಆಡಳಿತ ಅಧಿಕಾರಿಗಳು ಮತ್ತು ನೌಕರ ಬಂಧುಗಳು ಒಬ್ಬರಿಗೊಬ್ಬರು ನಿಸ್ವಾರ್ಥತೆಯಿಂದ ಶ್ರಮಿಸಿದ್ದೇ ಆದರೆ ಈ ಸಂಸ್ಥೆಯು ಸಹ ವಿಶ್ವಮಟ್ಟಕ್ಕೆ ಇರುತ್ತದೆ ಮತ್ತು ಅದಕ್ಕೆ ಅಗತ್ಯವಿರುವ ಸಲಹೆ ಮಾರ್ಗದರ್ಶನ ಸಹಕಾರವನ್ನು ನೀಡುತ್ತೇನೆಂದು ನುಡಿದರು.


**ಇದೇ ವೇದಿಕೆಯಲ್ಲಿ ಎಲ್ಲರಿಗೂ ಮನಮುಟ್ಟುವಂತಹ ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದಂತಹ ಮುತ್ತಿನಂತಹ ಒಂದು ಮಾತನ್ನು ಹೇಳಿದರು, ಅದುವೇ ಯಾವುದೇ ಒಬ್ಬ ವ್ಯಕ್ತಿ ಅಧಿಕಾರ ಅಥವಾ ಪದವಿಯಲಿ ಇದ್ದಾಗ ಸಿಗುವ ಗೌರವ, ಬೆಲೆಗಿಂತ, ಅಧಿಕಾರ ಸ್ಥಾನಮಾನ, ಪದವಿಯಿಂದ ಕೆಳಗಿಳಿದ ಸಮಯ ಮತ್ತು ಸಂದರ್ಭದಲ್ಲಿ ಸಂಸ್ಥೆ ಹಾಗೂ ಸಮಾಜದಲ್ಲಿ ಸಿಗುವ ಗೌರವವೇ ನಮ್ಮ ಸಾಧನೆಯನ್ನು ನಿರ್ಧರಿಸುವ ಮಾನದಂಡವಾಗಿರುತ್ತದೆ, ಆದುದರಿಂದ ತಾವುಗಳೆಲ್ಲರೂ ಈ ಒಂದು ಅಂಶವನ್ನು ಗಮನದಲ್ಲಿಟ್ಟುಕೊಂಡು ಕರ್ತವ್ಯ ನಿರ್ವಹಿಸಬೇಕಾಗಿತ್ತದೆ ಎಂದು ಕಿವಿ ಮಾತು ಹೇಳಿದರು.**

ಇಂತಹ ಅದಮ್ಯ ಚೇತನರ ಗೌರವ ಸಮರ್ಪಣೆ ಕಾರ್ಯಕ್ರಮದ ಒಂದು ಭಾಗವಾಗಿ ನಾನಾದರೂ ಇದ್ದದ್ದು ನನ್ನ ಜೀವನದ ಶ್ರೇಷ್ಠ ಘಳಿಗೆ ಎಂದು ಭಾವಿಸುತ್ತಾ ಶ್ರೀಯುತರಿಗೆ ಆತ್ಮಪೂರ್ವಕ ಗೌರವ ಸಮರ್ಪಣೆಯನ್ನು ಈ ಲೇಖನದ ಮೂಲಕ ನೀಡಬಯಸುತ್ತೇನೆ.

**ಡಾ|| ಸಿ.ಎನ್. ಮಂಜುನಾಥ್ ಅವರಿಗೆ ಸಂದ ಪ್ರಶಸ್ತಿಗಳು...**

ಇವರ ಅಪ್ರತಿಮ ಸಾಧನೆಯನ್ನು ಪರಿಗಣಿಸಿ ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಭಾರತ ಸರ್ಕಾರ ಇವರಿಗೆ 2007ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಅಭಿನಂದಿಸಿದೆ. ಜೊತೆಗೆ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಏಷಿಯಾ ಫೆಸಿಫಿಕ್ ವ್ಯಾಸ್ಕೂಲರ್ ಸಮಾವೇಶದಲ್ಲಿ ದ್ರೋಣಾಚಾರ್ಯ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಇವರ ಮುಡಿಗೇರಿವೆ.

**ಗಿರೀಶ ಸಿ. ಎನ್.**
ಪ್ರಯೋಗ ಶಾಲಾ ತಂತ್ರಜ್ಞ ಅಧಿಕಾರಿ
ಕೆಂಪೇಗೌಡ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ
ಪ್ರಧಾನ ಕಾರ್ಯದರ್ಶಿ
ರಾಜ್ಯ ಒಕ್ಕಲಿಗ ಸಂಘ ಎಂಪ್ಲಾಯೀಸ್ ಅಸೋಸಿಯೇಷನ್(ರಿ)



# ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯ

ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು–04.






**ಶ್ರೀ ಬಿ.ಪಿ. ಮಂಜೇಗೌಡ**
ಕಾರ್ಯಾಧ್ಯಕ್ಷರು
**ಅಧ್ಯಕ್ಷರು,** ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳು,
ಫಾರ್ಮಸಿ, ಕೆ.ಐ.ಪಿ.ಟಿ ಮತ್ತು ಕೆ.ಹೆಚ್.ಐ.ಪಿ

**ಡಾ. ಪ್ರೇಮ್‌ಕುಮಾರ್ ಬಿ.ಎನ್.**
ಪ್ರಾಂಶುಪಾಲರು
ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯ
ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು-04.



ರಾಜ್ಯ ಒಕ್ಕಲಿಗರ ಸಂಘವು ಕರ್ನಾಟಕ ಸರ್ಕಾರ ಮತ್ತು ರಾಜೀವ್ ಗಾಂಧೀ ಆರೋಗ್ಯ ವಿಶ್ವವಿದ್ಯಾಲಯದ ಅನುಮತಿಯೊಂದಿಗೆ ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯವನ್ನು 1997 ರಲ್ಲಿ ಬಿ.ಪಿ.ಟಿ ಪದವಿಯನ್ನು (Bachelor of Physiotherapy) ಪ್ರಾರಂಭ ಮಾಡಿತ್ತು. ಈ ಕಾಲೇಜಿಗೆ ಮೊದಲಿಗೆ 25 ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪಡೆದುಕೊಂಡಿರುತ್ತಾರೆ ಮತ್ತು 2004 ರಲ್ಲಿ ಎಂ.ಪಿ.ಟಿ ಸ್ನಾತಕೋತ್ತರ ಪದವಿಯನ್ನು (Master of Physiotherapy) 05 ವಿದ್ಯಾರ್ಥಿಗಳ ಪ್ರವೇಶಾತಿಯೊಂದಿಗೆ ಪ್ರಾರಂಭಿಸಲಾಗಿದೆ ನಂತರದ ದಿನಗಳಲ್ಲಿ ಬಿ.ಪಿ.ಟಿ 60 ವಿದ್ಯಾರ್ಥಿಗಳು ಮತ್ತು ಎಂ.ಪಿ.ಟಿ 30 ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಮಾಡಿಕೊಂಡಿದ್ದೇವೆ, ನಮ್ಮ ಕೆ.ಐ.ಪಿ.ಟಿ ಕಾಲೇಜಿನಲ್ಲಿ Ph.D ಗೈಡ್‌ಗಳು ಇರುವುದರಿಂದ 2023 ರಿಂದ Ph.D ಪ್ರೋಗ್ರಾಮ್‌ನ ಉನ್ನತ ವ್ಯಾಸಂಗವನ್ನು ಪ್ರಾರಂಭಮಾಡಿದ್ದೇವೆ.



ವಿಶ್ವಾದ್ಯಂತ ಬದಲಾಗುತ್ತಿರುವ ಆರೋಗ್ಯ ಸೇವೆಗಳ ದೃಷ್ಟಿಯಿಂದ ಫಿಸಿಯೋಥೆರಪಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಫಿಸಿಯೋಥೆರಪಿಯಿಂದ ಆರ್ಥೋ, ನ್ಯೂರೋ, ದಿವ್ಯಾಂಗ ಮಕ್ಕಳುಗಳಿಗೆ ಹಾಗೂ ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಕಡಿಮೆ ವೆಚ್ಚದಲ್ಲಿ ಫಿಸಿಯೋಥೆರಪಿ ಚಿಕಿತ್ಸೆಯನ್ನು ಕೊಡಲಾಗುತ್ತಿದೆ ಮತ್ತು ಬಡವರು ಹೆಚ್ಚಾಗಿ ಇದರಲ್ಲಿ ಉಪಯೋಗವನ್ನು ತೆಗೆದುಕೊಳ್ಳುತ್ತಿದ್ದಾರೆ.

ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಿಂದ ಫಿಸಿಯೋಥೆರಪಿ ಸಹ ಅನೇಕ ವಿಶೇಷ ವಿಭಾಗಗಳಿದ್ದು ವಿಭಾಗಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಉತ್ತಮವಾದ ಮಾರ್ಗದರ್ಶನ ನೀಡುತ್ತಿದ್ದು ಮತ್ತು ಸಂಬಂಧಪಟ್ಟ ವಿಭಾಗಗಳ ರೋಗಿಗಳಿಗೆ ಉತ್ತಮವಾದ ಚಿಕಿತ್ಸೆ ನೀಡಲು ಮತ್ತು ಸಂಶೋಧನೆಗಳನ್ನು ನಡೆಸಲು ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯವು ಉತ್ತಮ ನಿದರ್ಶನವಾಗಿದೆ.

ನಮ್ಮ ಕೆ.ಐ.ಪಿ.ಟಿ ಕಾಲೇಜು ಸಿಲಿಕಾನ್ ನಗರದ ಹೃದಯ–ಭಾಗದಲ್ಲಿರುವುದರಿಂದ ಮತ್ತು ಕಿಮ್ಸ್ ಆಸ್ಪತ್ರೆಗೆ ನಮ್ಮ ಕಾಲೇಜು ಹೊಂದಾಣಿಕೆಯಾಗಿರುತ್ತದೆ. ಈ ಆಸ್ಪತ್ರೆಯಲ್ಲಿ ಆರ್ಥೋ ವಿಭಾಗ, ಸರ್ಜರಿ ವಿಭಾಗ, ಹೃದಯ ವಿಭಾಗ, ಪ್ರಸೂತಿ ವಿಭಾಗ, ನರಗಳ ವಿಭಾಗ ಇನ್ನಿತರ ವಿಭಾಗಗಳಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಬಡವರು, ರೈತಾಪಿ ವರ್ಗದವರು ಬಂದು ನಮ್ಮ ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ ಹೆಚ್ಚಿನ ಚಿಕಿತ್ಸೆಯನ್ನು ತೆಗದುಕೊಂಡು ಗುಣಮುಖರಾಗಿ ಹೋಗುತ್ತಿದ್ದಾರೆ. ನಮ್ಮ ಕಾಲೇಜಿನ ವತಿಯಿಂದ ಉಚಿತ ಶಿಬಿರಗಳನ್ನು ಮಾಡಿದ್ದೇವೆ ನಮ್ಮ ವಿದ್ಯಾರ್ಥಿಗಳು ಸಜ್ಜನ್ ರಾವ್





ಸರ್ಕಲ್‌ನಲ್ಲಿರುವ ವಿಶೇಷ ಚೇತನರ ಸ್ಕೂಲ್‌ನಲ್ಲಿ ದಿವ್ಯಾಂಗ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆಯನ್ನು ನೀಡುತ್ತಿದ್ದಾರೆ ಇದರಿಂದ ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯಕ್ಕೆ ಹೆಚ್ಚಿನ ಪ್ರಶಂಸೆ ಸಿಗುತ್ತಿದೆ.

ನಮ್ಮ ಕಾಲೇಜಿನ ಹೊರರೋಗಿಗಳ ವಿಭಾಗದಲ್ಲಿ (OPD) ಆರ್ಥೋ, ನ್ಯೂರೋ, ಕಾರ್ಡಿಯೋ, ಪಿಡಿಯಾಟ್ರಿಕ್, ಮೂಮೆಂಟ್ ಸೈನ್ಸ್, ಸ್ಪೋರ್ಟ್ಸ್ ಸೈನ್ಸ್ 7 ವಿಶೇಷ ವಿಭಾಗಗಳಿದ್ದು ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ವಿಭಾಗದ ವಿದ್ಯಾರ್ಥಿಗಳೂ ಉತ್ತಮ ಚಿಕಿತ್ಸೆ ನೀಡುವುದರಿಂದ ನಗರಗಳಿಂದ, ಹಳ್ಳಿಗಳಿಂದ ಜನರು ಬಂದು ಉತ್ತಮ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಮ್ಮ ಕೆ.ಐ.ಪಿ.ಟಿ ಕಾಲೇಜಿಗೆ ವಿದ್ಯಾಭ್ಯಾಸಕ್ಕಾಗಿ ಹೊರ ರಾಜ್ಯಗಳಿಂದ, ಹೊರ ದೇಶಗಳಿಂದ ವಿದ್ಯಾರ್ಥಿಗಳು ಬಂದು ಸೇರ್ಪಡೆಯಾಗುತ್ತಿದ್ದಾರೆ. ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಹೊರ ದೇಶಗಳಲ್ಲಿ ಹಲವು ಹುದ್ದೆಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ ಮತ್ತು ಉನ್ನತ ವ್ಯಾಸಂಗವನ್ನು ಸಹ ಮಾಡುತ್ತಿದ್ದಾರೆ. ನಮ್ಮ ಕೆ.ಐ.ಪಿ.ಟಿ ಕಾಲೇಜಿನ ವಿದ್ಯಾರ್ಥಿಗಳು ಮಲ್ಟಿ ನ್ಯಾಷಿನಲ್ ಕಂಪನಿಗಳಲ್ಲಿ, ಕಾರ್ಪೋರೇಟ್ ಹಾಸ್ಪಿಟಲ್‌ಗಳಲ್ಲಿ, ಕೇಂದ್ರ ಸರ್ಕಾರಿ ಹಾಸ್ಪಿಟಲ್‌ಗಳಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ ಹಾಗೂ ಸ್ವಂತ ಕ್ಲಿನಿಕ್‌ಗಳನ್ನು ಪ್ರಾರಂಭಮಾಡಿದ್ದಾರೆ.

ನಮ್ಮ ಕಾಲೇಜಿನ ವಿದ್ಯಾರ್ಥಿಗಳು ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಕ್ರೀಡಾ ತಂಡಗಳು ಹಾಗೂ ಒಲಪಿಂಕ್ ಗೇಮ್ಸ್‌ನ ತಂಡಗಳಲ್ಲಿ ಫಿಸಿಯೋ ಥೆರಪಿಸ್ಟ್‌ಗಳಾಗಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಆಧುನಿಕ ಆರೋಗ್ಯ ವ್ಯವಸ್ಥೆಗಳ ಅಡಿಯಲ್ಲಿ ಕಾರ್ಯ ಕ್ಷಮತೆಯಿಂದ ಕಾರ್ಯನಿರ್ವಹಿಸುತ್ತಿದ್ದು ಜನ ಸಾಮಾನ್ಯರಲ್ಲಿ ಆರೋಗ್ಯ ಸಂಬಂಧಿಸಿದಂತೆ ತಿಳುವಳಿಕೆ, ಉತ್ತಮ ಚಿಕಿತ್ಸೆ ಮತ್ತು ಉತ್ತಮ ಮಾರ್ಗದರ್ಶನ ನೀಡಲು ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯವು ಸದಾ ಸನ್ನದ್ಧವಾಗಿರುತ್ತದೆ.

ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿಯು ಕಲಿಕೆಯ ಅನುಭವವು ತರಗತಿಯ ನಾಲ್ಕು ಗೋಡೆಗಳ ಆಚೆಗೆ ವಿಸ್ತರಿಸುತ್ತದೆ ಎಂದು ದೃಢವಾಗಿ ನಂಬುತ್ತದೆ. ಬನಶಂಕರಿ 2 ನೇ ಹಂತದ ಕಿಮ್ಸ್ ಆವರಣದಲ್ಲಿ ಪ್ರೀ ಮತ್ತು ಪ್ಯಾರಾ ಕ್ಲಿನಿಕಲ್ ವಿಷಯಗಳ ಸೌಲಭ್ಯವಿದೆ ಹಾಗೂ ಸಾವಿರಕ್ಕು ಹೆಚ್ಚು ಹಾಸಿಗೆಗಳ ಮಲ್ಟಿ–ಸ್ಪೆಷಾಲಿಟಿ ಮತ್ತು ಸೂಪರ್–ಸ್ಪೆಷಾಲಿಟಿ ಆಸ್ಪತ್ರೆಯಾದ KIMS ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದೊಂದಿಗೆ ಸಹಯೋಗ ಹೊಂದಿದ್ದೇವೆ. ನಮ್ಮ ಕೇಂದ್ರ ಗ್ರಂಥಾಲಯವು ಬನಶಂಕರಿಯ ಕಿಮ್ಸ್ ಆಸ್ಪತ್ರೆ ಆವರಣದಲ್ಲಿದೆ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳುಕೂಡ ನಮ್ಮ ಬನಶಂಕರಿಯ ಕಿಮ್ಸ್ ಆವರಣದಲ್ಲಿವೆ.

ನಮ್ಮ KIPT ಕಾಲೇಜು ಸಿಲಿಕಾನ್ ನಗರ ಬೆಂಗಳೂರಿನ ಹೃದಯಭಾಗದಲ್ಲಿದ್ದು ಇದು 30,000 ಚದರ ಅಡಿ ಪ್ರದೇಶದಲ್ಲಿ ಸ್ವತಂತ್ರ ಕಾಲೇಜು ಕಟ್ಟಡದಲ್ಲಿ ಒಳರೋಗಿ ಮತ್ತು ಹೊರರೋಗಿ ವಿಭಾಗಗಳನ್ನು ಹೊಂದಿದೆ.






# ಕೆಂಪೇಗೌಡ ಇನ್ಸ್ಟಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್

ಶ್ರೀಗಂಧದಕಾವಲು, ಬೆಂಗಳೂರು – 560091.



**ಶ್ರೀ ಬಿ.ಪಿ. ಮಂಜೇಗೌಡ**
ಕಾರ್ಯಾಧ್ಯಕ್ಷರು
**ಅಧ್ಯಕ್ಷರು,** ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳು,
ಫಾರ್ಮಸಿ, ಕೆ.ಐ.ಪಿ.ಟಿ ಮತ್ತು ಕೆ.ಹೆಚ್.ಐ.ಪಿ

**ಪ್ರೊ. ಬಿ.ಜಿ. ಶಂಕರೇಗೌಡ**
ಪ್ರಾಂಶುಪಾಲರು
ಕೆಂಪೇಗೌಡ ಇನ್ಸ್ಟಟ್ಯೂಟ್ ಆಫ್
ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ಶ್ರೀಗಂಧದಕಾವಲು



ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾದ ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲಿ ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳಲ್ಲಿ ಪ್ರಮುಖ ಸಂಸ್ಥೆಯಾದ ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್ ಕಾಲೇಜು, 1993ರಲ್ಲಿ ಶ್ರೀಗಂಧದಕಾವಲು ಪ್ರಥಮ ದರ್ಜೆ ಕಾಲೇಜು ಎಂಬ ಹೆಸರಿನಲ್ಲಿ ಆರ್ಥಿಕವಾಗಿ ಹಿಂದುಳಿದ, ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಆಶಾಕಿರಣವಾಗಿ ಎಚ್.ಇ.ಕೆ ವಿಭಾಗವನ್ನು ಬೆಂಗಳೂರು ವಿಶ್ವವಿದ್ಯಾಲಯದ ಅನುಮತಿಯೊಂದಿಗೆ ಪ್ರಾರಂಭವಾಯಿತು.

ನಂತರ 1999ರಲ್ಲಿ ಎಚ್.ಇ.ಪಿ, 2000ರಲ್ಲಿ ಎಚ್.ಇ.ಎಸ್, ಮತ್ತು 2018ರಲ್ಲಿ ಪತ್ರಿಕೋದ್ಯಮ ಎಂಬ ಕಲಾವಿಭಾಗಗಳನ್ನು ತೆರೆಯಲಾಯಿತು.

2005ರಲ್ಲಿ ಬಿ.ಕಾಂ, 2011ರಲ್ಲಿ ಬಿ.ಬಿ.ಎಂ, ಮತ್ತು 2018 ರಲ್ಲಿ ಎಂ.ಕಾಂ ಕೋರ್ಸ್ಗಳನ್ನು, ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ, ಪ್ರಾರಂಭಿಸಲಾಯಿತು.

ಸಂಸ್ಥೆಯ ಅಭಿವೃದ್ಧಿಯ ದೃಷ್ಟಿಯಿಂದ ಅಂದಿನ ಪ್ರಾಂಶುಪಾಲರಾದ ಡಾ.ಉದ್ದಂಡಯ್ಯನವರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾದ ನಂತರ ಮೈಸೂರು ವಿಶ್ವವಿದ್ಯಾಲಯದ ಅನುಮೋದನೆಯೊಂದಿಗೆ 2011 ರಲ್ಲಿ ಎಂ.ಕಾಂ ಮತ್ತು ಎಂ.ಬಿ.ಎ ಕೋರ್ಸ್ಗಳನ್ನು ಪ್ರಾರಂಭಿಸಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜಿಗೆ ಒಂದು ಸಂಪೂರ್ಣ ಕಾಯಕಲ್ಪ ದೊರಕಿಸಿದರು.

ಡಾ. ಉದ್ದಂಡಯ್ಯನವರ ಅವಧಿಯಲ್ಲಿ ಕಾಲೇಜನ್ನು ಒಂದು ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಿದರು. ನಂತರ ತಮ್ಮ ಹುದ್ದೆಗೆ ಸ್ವಯಂ ನಿವೃತ್ತಿಯನ್ನು ಪಡೆದು ರಾಜಕೀಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ನಂತರ ಬಂದ ಪ್ರಾಚಾರ್ಯರುಗಳಲ್ಲಿ ಡಾ.ಮಹೇಶ್ ರವರು ಕಾಲೇಜಿನ ಅಭಿವೃದ್ಧಿಯ ಕಾಳಜಿಯಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಲವಾರು ಕೌಶಲ್ಯ ಅಭಿವೃದ್ಧಿಯ ಕೋರ್ಸ್‌ಗಳನ್ನು ಪ್ರಾರಂಭಿಸುವುದರು. ಡಾ. ಶ್ರೀ ಶ್ರೀ ಶ್ರೀ ನಿರ್ಮಲಾನಂದ ಸ್ವಾಮೀಜಿರವರನ್ನು ಪೂರ್ಣಕುಂಭ ಮೆರವಣಿಗೆಯೊಂದಿಗೆ ಸ್ವಾಗತಿಸಿ



ಹಾಗೂ ಶ್ರೀಗಳ ಆಶೀರ್ವಚನದೊಂದಿಗೆ ಕಾಲೇಜಿನ ಬೆಳ್ಳಿ ಹಬ್ಬವನ್ನು ದಿನಾಂಕ 22-01-2018ರಲ್ಲಿ ಅದ್ದೂರಿಯಾಗಿ ಆಯೋಜಿಸಿಲಾಯಿತು.

ನಂತರ 2021 ರಲ್ಲಿ ಪ್ರೊ ಕಬ್ಬಡಿ ಮಾದರಿಯಲ್ಲಿ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯನ್ನು ಭವ್ಯವಾದ ಒಳಾಂಗಣ ಕ್ರೀಡಾಂಗಣ ಸಿದ್ದಪಡಿಸಿ ಹೊನಲು ಬೆಳಕಿನ ಪಂದ್ಯಾವಳಿಗಳನ್ನು ನಮ್ಮ ಕಾಲೇಜಿನ ಆವರಣದಲ್ಲಿ ಯಶಸ್ವಿಯಾಗಿ ನೆರವೇರಿಸಿರುವುದು ಕಾಲೇಜಿನ ಪ್ರಮುಖ ಘಟ್ಟ. ಇವರ ನಂತರ ಪ್ರಾಚಾರ್ಯರಾಗಿ ಡಾ.ಮೋಹನ್ ಕುಮಾರ್ ಕಾರ್ಯನಿರ್ವಹಿಸಿದರು.

ಪ್ರಸ್ತುತ ಪ್ರಾಂಶುಪಾಲರಾಗಿರುವ ಪ್ರೊ ಬಿ.ಜಿ ಶಂಕರೇಗೌಡರವರು ಎಲ್ಲಾ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು 2023-24ನೇ ಸಾಲಿನ ಕಾಲೇಜು ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ದಿನಾಂಕ 12-01-2024 ರಂದು ಶ್ರೀಗಂಧದ-ಕಾವಲು ವಿದ್ಯಾಸಂಸ್ಥೆಗಳ ಆಡಳಿತ ಮಂಡಳಿ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಬಿ.ಪಿ ಮಂಜೇಗೌಡರ ಅಧ್ಯಕ್ಷತೆಯಲ್ಲಿ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಡಿ. ಹನುಮಂತಯ್ಯರವರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಮುಖ್ಯ ಅತಿಥಿಗಳಾಗಿ ಆಂತರಿಕ ಲೆಕ್ಕ ಪರಿಶೋಧಕರಾದ ಸನ್ಮಾನ್ಯ ಶ್ರೀ ರಾಘವೇಂದ್ರರವರು, ಬೆಂಗಳೂರು ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ಕುಲಸಚಿವರಾದ ಡಾ. ಶ್ರೀನಿವಾಸ್ ಚೌಡಪ್ಪನವರು, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಹಾಗೂ ಖ್ಯಾತ ವೈದ್ಯರಾದ ಡಾ. ಆಂಜಿನಪ್ಪನವರ ಉಪಸ್ಥಿತಿಯಲ್ಲಿ ಅದ್ದೂರಿ ಕಾರ್ಯಕ್ರಮವನ್ನು ನೆರವೇರಿಸಲಾಯಿತು, ಈ ಕಾರ್ಯಕ್ರಮದಲ್ಲಿ ಶ್ರೀಗಂಧದಕಾವಲು ವಿದ್ಯಾಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಪತ್ರಿಕೋದ್ಯಮ ವಿಭಾಗದ ಕುಮಾರಿ ಸಿ.ಕೆ ಸುಪ್ರೀತಾರವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಮಾರಂಭದಲ್ಲಿ ಹಾಜರಿದ್ದ ಗಣ್ಯರನ್ನು ಹಾಗೂ ಸಭಿಕರನ್ನು ಸಮಾಜಶಾಸ್ತ್ರ ವಿಭಾಗದ ಡಾ.ವೆಂಕಟೇಶರವರು ಸ್ವಾಗತಿಸಿದರು, ಆಂಗ್ಲಭಾಷಾ ವಿಭಾಗದ ಶ್ರೀಮತಿ ವಿ ಅನುರಾಧರವರು ವಂದನಾರ್ಪಣೆಯನ್ನು ಸಲ್ಲಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಈ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟಮಟ್ಟದ ಸರ್ಕಾರದ ಉನ್ನತ ಪದವಿಗಳ ಮೂಲಕ ಸೇವೆ ಸಲ್ಲಿಸುತ್ತಿದ್ದಾರೆ ಅಲ್ಲದೆ ಈ ಭಾಗದ ಬಹುತೇಕ ಉದ್ಯಮಿಗಳು, ಸಮಾಜ ಸೇವಕರು ಮತ್ತು ರಾಜಕಾರಣಿಗಳು ನಮ್ಮ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾರೆ ಎನ್ನುವುದು ಕಾಲೇಜಿನ ಪ್ರತಿಷ್ಠೆಯಾಗಿದೆ. ಅದರಲ್ಲೂ ಮಹಿಳೆಯರ ಸ್ವಾವಲಂಬಿ







ಬದುಕಿಗೆ ನಮ್ಮ ಪದವಿ ಕಾಲೇಜು ಆಸರೆಯಾಗಿದೆ ಎಂದು ಹೇಳುವುದಕ್ಕೆ ಹೆಮ್ಮೆಯಾಗುತ್ತದೆ.

ಸಮಾರಂಭದಲ್ಲಿ ಗಣ್ಯರುಗಳು ಮಾತನಾಡುತ್ತಾ ರಾಜ್ಯ ಒಕ್ಕಲಿಗರ ಸಂಘವು ಶ್ರೀಗಂಧದಕಾವಲು ಸಂಸ್ಥೆಗಳನ್ನು ಯಾವುದೇ ಆರ್ಥಿಕ ಲಾಭದ ದೃಷ್ಟಿಕೋನ ಇಟ್ಟುಕೊಳ್ಳದೆ ಕೇವಲ ಸೇವಾ ಮನೋಭಾವದಿಂದ ಈ ಸಂಸ್ಥೆಗಳನ್ನು ನಡೆಸಲಾಗುತ್ತಿದೆ ಎಂದು ಹೇಳಿದರು. ಈ ಸಂಸ್ಥೆಯು ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಹೆಣ್ಣುಮಕ್ಕಳ ಬದುಕಿಗೆ ಆಸರೆಯಾಗುತ್ತಿರುವುದು ಗೌರವ ತರುವ ವಿಷಯವೆಂದು ಪ್ರಸ್ತಾಪಿಸಿದರು.

ಸಂಸ್ಥೆಯ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಎಂಬಿಎ ಮತ್ತು ಮ್ಯಾನೇಜ್ಮೆಂಟ್ ಕೋರ್ಸ್ ಗಳನ್ನು ತೆರೆಯುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಹೊಸ ಹೊಸ ಕೋರ್ಸ್ ಗಳನ್ನು ಉನ್ನತ ಗುಣಮಟ್ಟದೊಂದಿಗೆ ತರುವ ಉದ್ದೇಶವನ್ನು ಹೊಂದಿದ್ದು ಎಲ್ಲ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳ ಪ್ರೋತ್ಸಾಹ ಹೀಗೆ ಇರಬೇಕೆಂದು ಮನವಿ ಮಾಡಿಕೊಂಡರು.

ಈ ಕಾಲೇಜಿನ ವಿದ್ಯಾರ್ಥಿಗಳು ರಾಜ್ಯ, ರಾಷ್ಟ ಮತ್ತು ಅಂತರಾಷ್ಟೀಯ ಕ್ರೀಡಾಪಟುಗಳಾಗಿ ರೂಪಗೊಂಡಿರುವುದು ತುಂಬಾ ಸಂತೋಷದ ವಿಷಯ, ಮುಂದಿನ ದಿನಗಳಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಮತ್ತಷ್ಟು ಪ್ರೋತ್ಸಾಹ ನೀಡಬೇಕೆಂದು ಉಪನ್ಯಾಸಕರಿಗೆ ಕಿವಿಮಾತು ಹೇಳಿದರು.

ಶ್ರೀಗಂಧದಕಾವಲಿನಲ್ಲಿ ಹಲವಾರು ಸಂಸ್ಥೆಗಳನ್ನು ತೆರೆಯುವುದಕ್ಕೆ ಉತ್ತಮ ವಾತಾವರಣವಿದ್ದು ಮುಂದಿನ ದಿನಗಳಲ್ಲಿ ನಮ್ಮ ಆಡಳಿತ ಮಂಡಳಿ ಇದಕ್ಕೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು ಎಂದು ಸಮಾರಂಭದಲ್ಲಿ ತಿಳಿಸಿದರು.

ವಿದ್ಯಾರ್ಥಿಗಳು ಕಾಲೇಜಿನಲ್ಲಿರುವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ತಮ್ಮ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

**ಡಾ.ವೆಂಕಟೇಶ,** ಎಂ.ಎ.,ಪಿಎಚ್.ಡಿ.,
ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ,
ಕೆ.ಐ.ಎಂ.ಎಸ್.ಆರ್ ಕಾಲೇಜ್, ಶ್ರೀಗಂಧದ ಕಾವಲು, ಬೆಂಗಳೂರು-91



# ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ
# ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ






**ಶ್ರೀ ಎಸ್.ಕೆ. ಧರ್ಮೇಶ್ ಸಿರಿಬೈಲ್**
ಅಧ್ಯಕ್ಷರು
ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ

**ಡಾ. ಅಶ್ವಥ್.ಎಂ.ಯು**
ಪ್ರಾಂಶುಪಾಲರು
ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ



ರಾಜ್ಯ ಒಕ್ಕಲಿಗರ ಸಂಘದ ಅಡಿಯಲ್ಲಿ ಬರುವ ಸಂಸ್ಥೆಗಳಲ್ಲಿ ಒಂದಾದ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯಕ್ಕೆ ಯು.ಜಿ,ಸಿ ಯಿಂದ ಸ್ವಾಯತ್ತ (AUTONOMOUS) ಸ್ಥಾನಮಾನ ದೊರೆತಿದೆ. ಬಿ.ಐ.ಟಿಯ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಖ್ಯಾತಿಯನ್ನು ಪಡೆದು 1979 ರಲ್ಲಿ 4 ವಿಭಾಗಗಳೊಂದಿಗೆ ಪ್ರಾರಂಭವಾಗಿ ಇಂದು 13 ಬಿ.ಇ, 3



ಎಂ.ಟೆಕ್, ಎಂ.ಸಿ.ಎ ಮತ್ತು ಎಂ.ಬಿ.ಎ ವಿಭಾಗಗಳನ್ನು ಹೋಂದಿದೆ. ಸ್ವಾಯತ್ತ (AUTONOMOUS) ಸಂಸ್ಥೆಯಾಗಿರುವುದರಿಂದ ಕಾಲ ಕಾಲಕ್ಕೆ ಅನುಗುಣವಾಗಿ ಪಠ್ಯಕ್ರಮಗಳನ್ನು ಮಾರ್ಪಾಡು ಮಾಡಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಅನುಕೂಲವಾಗುತ್ತದೆ.

### ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ

ಬಿ.ಐ.ಟಿ ಕೇಂದ್ರ ಗ್ರಂಥಾಲಯವನ್ನು 1979ರಲ್ಲಿ ಸಾಧಾರಣ ಸಂಖ್ಯೆಯ ಪುಸ್ತಕಗಳು ಮತ್ತು ಇತರೆ ದಾಖಲೆಗಳೊಂದಿಗೆ ಸ್ಥಾಪಿಸಲಾಯಿತು ಅದರ ಪ್ರಾರಂಭದಿಂದಲೂ ಗ್ರಂಥಾಲಯವು ತನ್ನ ಸಂಗ್ರಹವನ್ನು ಸ್ಥಿರವಾಗಿ ಅಭಿವೃದ್ಧಿ ಪಡಿಸಿಕೊಂಡು ಬಂದಿದೆ. ಪ್ರಸ್ತುತ ಗ್ರಂಥಾಲಯು ಎಂಜಿನಿಯರಿಂಗ್ ಪಠ್ಯ-ಪುಸ್ತಕಗಳು, ನಿಯತಕಾಲಿಕೆಗಳು, ಸಾಂದರ್ಭಿಕ ಪುಸ್ತಕಗಳು, ಸಾಂಸ್ಥಿಕ ಭಂಡಾರಗಳು, ಇಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳು ಎಲೆಕ್ಟ್ರಾನಿಕ್ ಸಂಪನ್ಮೂಲಗಳಂತಹ ಪ್ರಭಾವಶಾಲಿ ಮತ್ತು ತಾಂತ್ರಿಕ ಮಯ ಮಾಹಿತಿ ಮೂಲಗಳನ್ನು ಒಳಗೊಂಡಿರುವ ಸರಿಸುಮಾರು 89,000 ಪುಸ್ತಕಗಳು 2405 ಬ್ಯಾಕ್ ವಾಲ್ಯೂಮ್ಸ್ ಜರ್ನಲ್ಸ್‌ಗಳು, 1300 ಯೋಜನಾ ವರದಿಗಳ ದಾಖಲೆಗಳನ್ನು ಹೊಂದಿದೆ.






ಇದರಲ್ಲಿ ಪುಸ್ತಕಗಳು ತಾಂತ್ರಿಕ ಇ-ಜರ್ನಲ್ಸ್ ಗಳು ಮತ್ತು ಸಿಡಿ ರೂಂಗಳು ಒಳಗೊಂಡಿದೆ ಹಾಗೂ ಪ್ರತಿ ವರ್ಷ 7,500 ಸಂಖ್ಯೆಯ ಅಂತರರಾಷ್ಟ್ರೀಯ ತಾಂತ್ರಿಕ ಜರ್ನಲ್ಸ್ ಗಳನ್ನು ಮತ್ತು ಹೊಸ ಆವೃತ್ತಿಯ ಪುಸ್ತಕಗಳನ್ನು ಖರೀದಿಸಲಾಗುತ್ತಿದೆ.

ಗ್ರಂಥಾಲಯವು ಸಂಪೂರ್ಣವಾಗಿ LIBSOFT ತಂತ್ರಾಂಶದಿಂದ ಗಣಕೀಕೃತಗೊಂಡಿದೆ (Digitization) http://119.161.98.143:8082/ Web OPAC (Online Public Access Catalogue) ಇದರ ಸಹಾಯದಿಂದ ಗ್ರಂಥಾಲಯದಲ್ಲಿರುವ ಮಾಹಿತಿಯನ್ನು ಹುಡುಕಬಹುದು.



ಗ್ರಂಥಾಲಯವು ತಾಂತ್ರಿಕ ವಿಜ್ಞಾನ, ನಿರ್ವಹಣೆ ಅಧ್ಯಯನಗಳು, ವ್ಯವಹಾರ ಆಡಳಿತ, ಭೌತಶಾಸ್ತ್ರ ರಸಾಯನಶಾಸ್ತ್ರ ಗಣಿತಶಾಸ್ತ್ರಗಳಿಗೆ ಸಂಬಂಧಿಸಿದಂತಹ ಹೇರಳ ಮಾಹಿತಿಯ ಮೂಲಗಳನ್ನು ಹೊಂದಿದ್ದು ಪರಿಣಿತಿ ಹೊಂದಿರುವ ಗ್ರಂಥಾಲಯದ ಸಿಬ್ಬಂದಿಗಳ ಸಹಕಾರದಿಂದ ಮಾಹಿತಿ ಸಂಪನ್ಮೂಲಗಳನ್ನು ಕ್ರೂಢೀಕರಿಸಿಕೊಂಡು ಅತ್ಯುನ್ನತ ಸೇವೆಯನ್ನು ನೀಡಲು ಶ್ರಮಿಸುತ್ತಿದೆ.

ಕಲಿಕೆ, ಬೋಧನೆ, ಸಂಶೋಧನೆ ಮತ್ತು ನಾವಿನ್ಯತೆಗಳನ್ನು ಬೆಂಬಲಿಸಲು ಗ್ರಂಥಾಲಯವು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತದೆ ಗ್ರಂಥಾಲಯವು ಪ್ರತಿಯೊಬ್ಬ ವಿದ್ಯಾರ್ಥಿ ಬೋಧಕ ಸಿಬ್ಬಂದಿ ಸಂಶೋಧಕ ಮತ್ತು ಪ್ರತಿ ಶೈಕ್ಷಣಿಕ ಕ್ಷೇತ್ರವನ್ನು ಮುಟ್ಟುವ ಸಂಸ್ಥೆಯ ಒಂದು ಭಾಗವಾಗಿದೆ.

ಕೇಂದ್ರ ಗ್ರಂಥಾಲಯವು ವಿದ್ಯಾಸಂಸ್ಥೆಯ ಕಲಿಕಾ ಸಮುದಾಯದ ಎಲ್ಲಾ ವಿಭಾಗಗಳಿಗೆ ಅವಶ್ಯವಿರುವ ಪುಸ್ತಕಗಳು ನಿಯತಕಾಲಿಕೆಗಳು ಮತ್ತು ಇತರೆ ದಾಖಲೆಗಳನ್ನು ಸಂಗ್ರಹಿಸಿ ವಿತರಣೆ ಮಾಡಲು ಕೇಂದ್ರೀಕೃತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ವಿಭಾಗದ ಮುಖ್ಯಸ್ಥರ ಶಿಫಾರಸ್ಸುಗಳು ಮತ್ತು ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರಿಂದ ಪಡೆದ ಪ್ರತಿಕ್ರಿಯೆ ಮತ್ತು ಸಲಹೆಗಳ ಆಧಾರದ ಮೇಲೆ ಪ್ರತಿವರ್ಷ ಗ್ರಂಥಾಲಯದ ಸಂಗ್ರಹವನ್ನು ಅಭಿವೃದ್ಧಿ ಮಾಡಲಾಗುತ್ತಿದೆ.

ಬೋಧನೆ ಕಲಿಕೆ ಮತ್ತು ಸಂಶೋಧನೆಗಳ ಅಗತ್ಯತೆಗಳಿಗೆ ಅವಶ್ಯವಿರುವ ಮಾಹಿತಿಗಳನ್ನು ಪುಸ್ತಕಗಳನ್ನು ವಿಡಿಯೋ ಮಲ್ಟಿ ಮೀಡಿಯಾ ಹಾಗೂ ಇತರೆ ಡಿಜಿಟಲ್ ವಸ್ತುಗಳನ್ನು ಮತ್ತು ಮುದ್ರಣ ಆಧಾರಿತ ಸಂಗ್ರಹಣೆಯನ್ನು ಹೆಚ್ಚಿಸಿಕೊಂಡು ಗ್ರಂಥಾಲಯ ಸೇವೆಯನ್ನು ತಾಂತ್ರಿಕಮಯ ಗೊಳಿಸಲು ಒತ್ತು ನೀಡಲಾಗಿದೆ.

ಕೇಂದ್ರ ಗ್ರಂಥಾಲಯವು ನೆಲಮಹಡಿಯ ಕಟ್ಟಡದಲ್ಲಿದ್ದು ನೆಲಮಹಡಿಯಲ್ಲಿಯೇ ಗ್ರಂಥ ಪರಿಚಲನೆಯ ಕೌಂಟರ್ ಸಹ ಇರುತ್ತದೆ ಹಾಗೂ ಪರಾಮರ್ಶನ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಮತ್ತು ನಿಯತಕಾಲಿಕೆಗಳ ವಿಭಾಗವು ಕೂಡ ಇರುತ್ತದೆ, ವಿದ್ಯಾಲಯದ ಎಲ್ಲಾ ವಿಭಾಗಗಳು ಗ್ರಂಥಾಲಯಗಳನ್ನು ಹೊಂದಿದ್ದು, ಪ್ರತಿಯೊಂದು ವಿಭಾಗವೂ ಕೂಡ ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಪುಸ್ತಕಗಳನ್ನು ಹೊಂದಿವೆ

ನಮ್ಮ ಗ್ರಂಥಾಲಯವು ನ್ಯಾಷನಲ್ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ ಕ್ಲಬ್ ಐ.ಐ.ಟಿ-ಖರಗ್ಪುರ್ ನೊಂದಿಗೆ ಸಂಯೋಜನೆಯನ್ನು ಹೊಂದಿದ್ದು, ಶ್ಲಾಘನೆಯ ಪ್ರಮಾಣಪತ್ರವನ್ನು 2023 ರಲ್ಲಿ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯವು ಭಾರತದ ಕರ್ನಾಟಕದಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಕ್ಲಬ್‌ಗಳಲ್ಲಿ ಒಂದೆಂದು ಗುರುತಿಸಲಾಗಿದೆ.


MINISTRY OF EDUCATION | INDIAN INSTITUTE OF TECHNOLOGY KHARAGPUR

The CERTIFICATE OF APPRECIATION is hereby granted to

**Bangalore Institute of Technology**

**Adjudged as One of The Best Performing NDLI Clubs in Karnataka India**

This certifies that the NDLI Club has displayed outstanding performance and unwavering dedication in promoting knowledge and learning through the National Digital Library of India (NDLI).

Through their remarkable efforts, they have successfully utilized the resources offered by the NDLI platform to foster a culture of continuous learning and digital literacy. Their commitment to organizing informative events, workshops, and study sessions has greatly contributed to the intellectual growth of its members and the wider community.

Their exceptional performance serves as an inspiring example of how a passion for learning can make a significant impact. Their achievements will serve as an inspiration to others, demonstrating the transformative power of digital resources and a passion for learning.

In recognition of their outstanding achievements, we proudly present this certificate as a token of appreciation and encouragement.

Congratulations on their remarkable performance, dedication, and contributions to promoting knowledge and learning.

NDLI Club

Prof. K. P. Sinhamahapatra
Joint Principal Investigator
National Digital Library of India Project
Chairman
Central Library IIT Kharagpur
Professor
Aerospace Engineering, IIT Kharagpur

Dr. B. Sutradhar
Joint Principal Investigator
National Digital Library of India Project
Librarian
Central Library IIT Kharagpur



**ಡಾ. ವೆಂಕಟೇಶ್ ಜಿ**
ಗ್ರಂಥಪಾಲಕರು,
ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ





ವಿಶ್ವ ಪುಸ್ತಕದ ದಿನಾಚರಣೆಯ ಅಂಗವಾಗಿ ಪ್ರಾಂಶುಪಾಲರಾದ ಡಾ.ಅಶ್ವಥ್.ಎಂ.ಯು ರವರು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರುಗಳಿಗೆ ಉಚಿತವಾಗಿ ನೀಡುತ್ತಿರುವುದು.





CSIR , NAL ನ Joint Head, ಡಾ. ಶಿವರಾಂ ಬಿ.ಎಸ್ ರವರಿಂದ ವಿದ್ಯಾರ್ಥಿಗಳಿಗೆ ಅರಿವು ಕಾರ್ಯಕ್ರಮ ಮತ್ತು ಸರಸ್ವತಿ ಪೂಜಾ ಕಾರ್ಯಕ್ರಮ




BIT – IEEE ವಿದ್ಯಾರ್ಥಿಗಳ ಸಂಘ, Dept of EE (VDT) & ECE ರವರಿಂದ EDA HUB ಪ್ರಯೋಗಾಲಯವನ್ನು ಹೊಸದಾಗಿ ಪ್ರಾರಂಭಿಸಲಾಯಿತು




# ನಮ್ಮ ಭಾರತ ದೇಶದಲ್ಲಿ ಮಹಿಳಾ ಸಬಲೀಕರಣ ಇನ್ನೂ ಒಂದು ಕನಸು

ನಮ್ಮ ಭಾರತದೇಶದಲ್ಲಿ ಮಾರ್ಚ್ 8 ರಂದು "ಅಂತರ ರಾಷ್ಟ್ರೀಯ ಮಹಿಳಾದಿನ" ಎಂದು ಆಚರಣೆ ಮಾಡಲಾಗುತ್ತದೆ. ಹೆಣ್ಣೆಂದರೆ ಜಗದ ಕಣ್ಣು ಶಕ್ತಿ ಸ್ವರೂಪಿಣಿ ಮಾತೃದೇವತೆ, ಶಕ್ತಿದೇವತೆ ಎಂದೆಲ್ಲಾ ಹೇಳುತ್ತಾರೆ. "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ" ಅಂದರೆ ಸ್ತ್ರೀಗೆ ಎಲ್ಲಿ ಪೂಜ್ಯನೀಯ ಸ್ಥಾನ ದೊರೆಯುತ್ತದೋ ಅಲ್ಲಿ ದೇವತೆಗಳು ನೆಲಸುತ್ತಾರೆ. ಎಂದು ಪುರಾಣ ಶಾಸ್ತ್ರದಲ್ಲಿ ಕವಿಗಳು ಹೇಳಿದ್ದಾರೆ. ಆದರೆ ಇಂದಿಗೂ ಸಹ ಸ್ತ್ರೀಗೆ ಕೆಲವು ಕಡೆ ಗೌರವನೀಯ ಸ್ಥಾನ ದೊರಕುತ್ತಿಲ್ಲ. ಮೊದಲು ನಮ್ಮ ಸುತ್ತ ಮುತ್ತಲಿನ ಪರಿಸರ ಅಭಿವೃದ್ಧಿಯಾದರೆ ಮಹಿಳಾ ಅಭಿವೃದ್ಧಿಯಾದಂತೆ.

ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಲಂಚರುಷುವತ್ತು ಗಳಿಂದಾಗಿ, ಉದ್ಯೋಗಾವಕಾಶಗಳಲ್ಲಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ, ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿದೆ. ಈಗಂತೂ ಹಳ್ಳಿ ಮತ್ತು ಪಟ್ಟಣಗಳಲ್ಲಿ ಸ್ತ್ರೀಶಕ್ತಿ ಯೋಜನೆ ಮತ್ತು ಮಹಿಳಾ ಸಂಘ ಸಂಸ್ಥೆಗಳು ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿದ್ದರೂ ಕೂಡ ಸುಲಭ ಸಾಧ್ಯವಾಗುತ್ತಿಲ್ಲ. ಉದಾಹರಣಗೆ ಹೇಳುವುದಾದರೆ ವರದಕ್ಷಿಣೆ ಪಿಡುಗು, ಮಹಿಳೆಯರ ಮೇಲೆ ದಬ್ಬಾಳಿಕೆ, ಹಿಂಸಾಚಾರಗಳು ದಿನನಿತ್ಯ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಬರುತ್ತಲೇ ಇದೆ. ಇದರಿಂದ ಮಹಿಳೆಯರು ಅಭಿವೃದ್ಧಿ ಸಾಧಿಸಲು ಕಷ್ಟವಾಗಿರುತ್ತದೆ.

ಹೆಣ್ಣಿನಲ್ಲಿ ಅಡಕವಾಗಿರುವ ಶಕ್ತಿ ಅಗಾಧ. ಈಕೆ ಒಬ್ಬಂಟಿಯಾಗಿರಲಿ, ಮನೆಯಲ್ಲಿ ಇರುವ ಮಹಿಳೆಯಾಗಲಿ, ಅಥವಾ ಕೆಲಸದಲ್ಲಿ ಇರುವ ಮಹಿಳೆಯಾಗಲಿ, ಇವಳು ತನ್ನದೇ ಆದ ವ್ಯಕ್ತಿತ್ವ ರೂಪಿಸಿಕೊಂಡಿರುತ್ತಾಳೆ. ಸಂಸಾರ, ನೌಕರಿ ಹಾಗೂ ಕುಟುಂಬ ನಿರ್ವಹಣೆಯಲ್ಲಿ ಬಹಳ ಪ್ರಾಮುಖ್ಯತೆ ಹೊಂದಿರುತ್ತಾಳೆ ಅವಿರತವಾಗಿ ದುಡಿಯುವ ಮಹಿಳೆಯ ಮಾನಸಿಕ ಹಾಗೂ ದೈಹಿಕ ಶಕ್ತಿ ಮೆಚ್ಚತಕ್ಕದ್ದು. ಎಲ್ಲವನ್ನೂ ನಿಭಾಯಿಸುವ ಛಾತಿ ಮಹಿಳೆಗೆ ಇದೆ.

ಒಂದು ಜೀವವನ್ನೇ ತನ್ನೊಡಲೊಳಗಿಟ್ಟುಕೊಂಡು ಆ ಸೃಷ್ಟಿಯನ್ನು ಈ ಭುವಿಗೆ ತರುವ ಪವಿತ್ರ ಜೀವಿಯೊಂದು ಹೆಣ್ಣು ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕವಾಗಿ ಶಕ್ತಿ ಉಳ್ಳವಳು.

ಕೆಲವರು ಹೆಣ್ಣಿಗೆ "ಅಬಲೆ" ಎಂದು ಹಣೆಪಟ್ಟಿ ಕಟ್ಟಿರುತ್ತಾರೆ. ಆದರೆ ಈ ಶತಮಾನದ ಹೆಣ್ಣು ಅಬಲೆ ಎನ್ನುವ ಮಾತನ್ನು ಕಿತ್ತೊಗೆದು ಗಗನದೆತ್ತರಕ್ಕೆ ಬೆಳೆಯಲು ಮುಂದಾಗಿದ್ದಾಳೆ. ಇಂತಹ ಎಲ್ಲಾ ಮಹಿಳೆಯರಿಗೆ, ನಮ್ಮ ಭಾರತದೇಶದಲ್ಲಿ ಮಹಿಳಾ ಸಬಲೀಕರಣ (ಮಹಿಳಾ ಅಭಿವೃದ್ಧಿ)ಗೆ ಯಶಸ್ಸು ಸಿಗಲಿ ಎಂದು ಹಾರೈಸೋಣವೇ ಮತ್ತು ಮಹಿಳಾ ಸಬಲೀಕರಣ ಇನ್ನೂ ಒಂದು ಕನಸಾಗಿ ಉಳಿಯದೆ ನನಸಾಗಲಿ ಎಂಬುದೇ ನಮ್ಮ ಆಶಯ.





**ಸರಸ್ವತಮ್ಮ**
ನಿವೃತ್ತ ಅಧೀಕ್ಷಕರು
ಕೆಂಪೇಗೌಡ ಶುಶ್ರೂಷ ಮಹಾವಿದ್ಯಾಲಯ
ರಾಜ್ಯ ಒಕ್ಕಲಿಗರ ಸಂಘ

# ದೆಹಲಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಭೇಟಿ



ನವದೆಹಲಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಮಂಡಳಿಯವರು ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ. ದೇವೇಗೌಡ ರವರನ್ನು ಅವರ ದೆಹಲಿ ನಿವಾಸದಲ್ಲಿ ಭೇಟಿ ನೀಡಿ ನಮ್ಮ ಕೆಂಪೇಗೌಡ ವೈದ್ಯಕೀಯ ಕಾಲೇಜಿನಲ್ಲಿ ಈಗಿರುವ 150 ವೈದ್ಯಕೀಯ ಸೀಟುಗಳನ್ನು 250 ಸೀಟುಗಳಿಗೆ ಹೆಚ್ಚಿಸುವ ಸಲುವಾಗಿ ಮಾನ್ಯ ಕೇಂದ್ರ ಸಚಿವರ ಬಳಿ ಮನವಿ ಮಾಡುವ ಬಗ್ಗೆ ಚರ್ಚೆ ನಡೆಸಿದರು ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾದ ಮಾನ್ಯ ಶ್ರೀ ಡಿ.ವಿ.ಸದಾನಂದಗೌಡರು ಹಾಗೂ ಮಾಜಿ ಸಚಿವರಾದ ಮಾನ್ಯ ಶ್ರೀ ವಿ.ಸೋಮಣ್ಣನವರು ಉಪಸ್ಥಿತರಿದ್ದರು.

# ಬಿ.ಐ.ಟಿ.ಯಲ್ಲಿ ರಕ್ತದಾನ ಶಿಬಿರ

ರಾಜ್ಯ ಒಕ್ಕಲಿಗರ ಸಂಘದ ಅಧೀನ ಸಂಸ್ಥೆಗಳಲ್ಲಿ ಒಂದಾದ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ ರೋಟ್ರಾಕ್ ಕ್ಲಬ್ ವತಿಯಿಂದ ರಕ್ತದಾನ ಶಿಬಿರವನ್ನು ದಿನಾಂಕ 09/02/2024 ರಂದು ಆಯೋಜಿಸಲಾಗಿತ್ತು. ಈ ಸಮಾರಂಭವನ್ನು ಕಾಲೇಜಿನ ಉಪ ಪ್ರಾಚಾರ್ಯರು, ಡಾ. ಜೆ ಪ್ರಕಾಶ್ ಹಾಗೂ ಬಿ.ವಿ.ಎಲ್ ನರಸಿಂಹ ಪ್ರಸಾದ್ ರೋಟರಿ ಆಗ್ನೆಯ ಅದ್ಯಕ್ಷರು, ಅಭಯ್ ಲೋಹಿಹ ರೋಟ್ರಾಕ್ ಅದ್ಯಕ್ಷರು, ಡಾ. ನಿವೇದಿತಾ ವೈಧ್ಯರು ಕೆಂಪೇಗೌಡ ಅಸ್ಪತ್ರೆ ಮತ್ತು ಸಂಶೋಧನ ಕೇಂದ್ರ, ಡಾ. ತೇಜಸ್ವಿ ವೈಧ್ಯರು ಕೆಂಪೇಗೌಡ ಅಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಚಂದ್ರು ತಾಂತ್ರಿಕ ಉಸ್ತುವಾರಿ, ಡಾ. ಶಂಕರ್ ಗೌಡ ಡೀನ್ ಸ್ಟೂಡೆಂಟ್ ಅಪೇರ್ಸ್ ಮತ್ತು ಡೆಟಾ ಸೈನ್ಸ್ ವಿಭಾಗದ ಮುಖ್ಯಸ್ಥರು, ಡಾ. ಕೆ. ಎಂ. ರೂಪ ಕೌಶಲ್ಯ ಅಭಿವೃದ್ದಿ ಮುಖ್ಯಸ್ಥರು, ಡಾ. ಅಶ್ವತಪ್ಪ ಪಿ ಇ.ಐ.ಇ ವಿಭಾಗದ ಮುಖ್ಯಸ್ಥರು, ಡಾ. ಸತೀಶ್ ಎನ್, ರೊಬೋಟಿಕ್ಸ್ ಮತ್ತು ಆರ್ಟಿಫಿಶಿಯಲ್ ಇಂಟಲಿಜನ್ಸ್ ವಿಭಾಗದ ಮುಖ್ಯಸ್ಥರು, ಡಾ. ದೀಪಕ್ ಎಂ.ಬಿ.ಎ. ವಿಭಾಗದ ಮುಖ್ಯಸ್ಥರು, ಡಾ. ರಾಜೇಶ್ವರಿ ಎಂ. ಟೆಲಿಕಾಂ ವಿಭಾಗದ ಮುಖ್ಯಸ್ಥರು ಮತ್ತು ಗಿರೀಶ್ ಎಸ್. ಆರ್. ನಿಯೋಜನೆ ಅಧಿಕಾರಿ ಸಮಾರಂಭದಲ್ಲಿ ಭಾಗಿಯಾಗಿದ್ದರು.



ಈ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು ಹಾಗೂ ಸಮಾರಂಭವನ್ನು ಕುರಿತು ತಮ್ಮ ಅನಿಸಿಕೆಗಳನ್ನು ಹಾಗೂ ರಕ್ತದಾನದಿಂದ ಆಗುವ ಪ್ರಯೋಜನಗಳನ್ನು ಸವಿಸ್ತಾರವಾಗಿ ವಿವರಿಸಿದರು.



ಈ ಕಾರ್ಯಕ್ರಮದಲ್ಲಿ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ 200 ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಬೋಧಕ ಮತ್ತು ಬೋಧಕೇತರ ನೌಕರರು ಪಾಲ್ಗೊಂಡು ರಕ್ತದಾನ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



VOKKALIGARA PATHRIKE(KANNADA MONTHLY) KARKAN/2010/37125 FEBRUARY 2024






# ಕೆಂಪೇಗೌಡ ಆಸ್ಪತ್ರೆ

- ನುರಿತ ವೈದ್ಯರ ಸೇವೆ.
- ಇನ್‌ಶೂರೆನ್ಸ್ ಸೌಲಭ್ಯ.
- ಕೈಗೆಟುಕುವ ದರದಲ್ಲಿ ಚಿಕಿತ್ಸೆ.
- ದಿನದ 24 ಗಂಟೆಯು ಲಭ್ಯ.
- ವಿಶೇಷ ತುರ್ತು ಚಿಕಿತ್ಸಾ ಘಟಕ.

ರಾಜ್ಯ ಒಕ್ಕಲಿಗರ ಸಂಘದ ಅಧಿಕೃತ ಸಾಮಾಜಿಕ ಜಾಲತಾಣಗಳಿಗಾಗಿ
**QR Code ಸ್ಕ್ಯಾನ್ ಮಾಡಿ**




ವಿಳಾಸ: ಕಿಮ್ಸ್ ಆಸ್ಪತ್ರೆ, ವಿ.ವಿ. ಪುರ, ಕೆ.ಆರ್. ರಸ್ತೆ, ಬೆಂಗಳೂರು–56004
ದೂರವಾಣಿ ಸಂಖ್ಯೆ: 080–26620036, 26624870, 26672976, 26672998


VOKKALIGARA PATHRIKE – Printed, Published and Edited by D. Hanumanthaiah on behalf of Rajya Vokkaligara Sangha. Printed at Vivek Colors, #4, 7th A Main, Magadi Road, Bengaluru - 560023. Published at # 148, Rajya Vokkaligara Sangha, K.R. Road, V.V. Puram, Bengaluru - 560 004.